ಕರ್ನಾಟಕ ಸರ್ಕಾರ
GOVERNMENT OF KARNATAKA
ಆಯುಕ್ತಾಲಯ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು
COMMISSIONARATE OF E. S. I. S. MEDICAL SERVICES
ಎಸ್. ನಿಜಲಿಂಗಪ್ಪ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010
S.Nijalingappa Road, II Block, RAJAJINAGAR, BANGALORE 560 010.
Website : https://esisms.karnataka.gov.in/
Tel :080 - 2332 4216
Email : esiscommissionarate@gmail.com

ಪ್ರಕಟಣೆ ಸಂಖ್ಯೆ: ವೈದ್ಯರು/102/2025-26

ದಿನಾಂಕ: 07-01-2026

## ಅಧಿಸೂಚನೆ

ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು, ಇಲಾಖೆಯಲ್ಲಿನ ಆಸ್ಪತ್ರೆಗಳು ಹಾಗೂ ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ ವಿಮಾ ವೈದ್ಯಾಧಿಕಾರಿಗಳಿಗೆ ಎದುರಾಗಿ ನೇರ ಸಂದರ್ಶನದ ಮೂಲಕ 32 ವೈದ್ಯರನ್ನು ಮಾಸಿಕ ರೂ. 60000/- ಗಳ ಸಂಚಿತ ವೇತನದಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಎಂ.ಬಿ.ಬಿ.ಎಸ್ ವೈದ್ಯರನ್ನು (ಅಭ್ಯರ್ಥಿಗಳನ್ನು) ಈ ಕೆಳಕಂಡ ಸ್ಥಳಗಳಲ್ಲಿ ನಿಗಧಿಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ನೇರ ಸಂದರ್ಶನಕ್ಕಾಗಿ ಆಹ್ವಾನಿಸಲಾಗಿದೆ.

ಈ ಹುದ್ದೆಗೆ ನಿಗಧಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಎಂ.ಬಿ.ಬಿ.ಎಸ್. ಪದವಿಯಾಗಿದ್ದು, ಅದಕ್ಕಿಂತ ಹೆಚ್ಚಿನ ವ್ಯಾಸಂಗ ಮಾಡಿರುವ ತಜ್ಞ ವೈದ್ಯರೂ ಸಹಾ ಭಾಗವಹಿಸಬಹುದಾಗಿದೆ. ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ನೇರ ನೇಮಕಾತಿಗೆ ನಿಗಧಿಪಡಿಸಿದ ಮೀಸಲಾತಿಯನುಸಾರ ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ, ಪ್ರವರ್ಗ-2ಎ, 2ಬಿ, 3ಎ, ಮತ್ತು 3ಬಿ ಅಭ್ಯರ್ಥಿಗಳಿಗೆ 38 ವರ್ಷ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ- 1 ಕ್ಕೆ 40 ವರ್ಷಗಳ ಗರಿಷ್ಠ ವಯೋಮಿತಿಯನ್ನು ನಿಗಧಿಪಡಿಸಲಾಗಿದೆ. ಎಲ್ಲಾ ವರ್ಗಕ್ಕೂ ಕನಿಷ್ಠ ವಯೋಮಿತಿ 18 ವರ್ಷಗಳಾಗಿರುತ್ತದೆ. ನಿಗಧಿತ ಆಯ್ಕೆ ಕೇಂದ್ರಗಳಲ್ಲಿ ಮೀಸಲಾತಿ ಪ್ರಕಾರ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಗರಿಷ್ಠ 60 ವರ್ಷ ವಯೋಮಾನದವರೆಗಿನ ಅರ್ಹ ವೈದ್ಯರನ್ನು ಆಯ್ಕೆ ಮಾಡಿಕೊಳ್ಳಲಾಗುವುದು. 40 ರಿಂದ 60 ವರ್ಷದೊಳಗಿನ ಅಭ್ಯರ್ಥಿಗಳನ್ನು ಮೀಸಲಾತಿ ವ್ಯಾಪ್ತಿಯಿಂದ ಹೊರಗಿಡಲಾಗಿದೆ ಹಾಗೂ ಈ ಹಿಂದೆ ಸರ್ಕಾರಿ ಇಲಾಖೆಯಲ್ಲಿ ವಿಶೇಷವಾಗಿ ಈ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಗುತ್ತಿಗೆ ಆಧಾರದ ವೈದ್ಯರನ್ನು ಆದ್ಯತೆ ಮೇಲೆ ಪರಿಗಣಿಸಲಾಗುವುದು ಈ ಒಪ್ಪಂದದ ನೇಮಕಾತಿಯು ಕ್ರಮಬದ್ಧ ನೇಮಕಾತಿ ಆದ ತಕ್ಷಣ ಮುಕ್ತಾಯವಾಗುತ್ತದೆ. ಆಸಕ್ತಿ ಉಳ್ಳವರು ಸೂಚಿತ ದಿನಾಂಕದಂದು ಹಾಜರಾಗಬಹುದು.

32 ವಿಮಾ ವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಗಾಗಿ ಸಮತಳ ಮೀಸಲಾತಿ ಈ ಕೆಳಕಂಡಂತೆ ಇದೆ.

| **ಮೀಸಲಾತಿ ಸಮತಳ** | ಸಾಮಾನ್ಯ (ಇತರ) | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ಮಾಜಿ ಸೈನಿಕ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಯೋಜನ ನಿರಾಶ್ರಿತ ಅಭ್ಯರ್ಥಿ | ತ್ರಿತ್ರೀಯ ಲಿಂಗ | ಒಟ್ಟು ಮೊತ್ತ |
|---|---|---|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ | 2 | 5 | 4 | 1 | 1 | 1 | 0 | 0 | 14 |
| ಪರಿಶಿಷ್ಟ ಜಾತಿ | 1 | 2 | 1 | 0 | 0 | 1 | 0 | 0 | 5 |
| ಪರಿಶಿಷ್ಟ ಪಂಗಡ | 1 | 1 | 1 | 0 | 0 | 0 | 0 | 0 | 3 |
| ಪ್ರವರ್ಗ-1 | 1 | 1 | 0 | 0 | 0 | 0 | 0 | 0 | 2 |
| ಪ್ರವರ್ಗ-2(ಎ) | 1 | 2 | 1 | 0 | 0 | 1 | 0 | 0 | 5 |

Scanned by CamScanner

| | | | | | | | | | |
|---|---|---|---|---|---|---|---|---|---|
| ಪ್ರವರ್ಗ-2(ಬಿ) | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-3(ಎ) | 1 | 0 | 0 | 0 | 0 | 0 | 0 | 0 | 1 |
| ಪ್ರವರ್ಗ-3(ಬಿ) | 1 | 0 | 0 | 0 | 0 | 0 | 0 | 0 | 1 |
| **ಒಟ್ಟು** | **9** | **11** | **7** | **1** | **1** | **3** | **0** | **0** | **32** |

ನೇರ ಸಂದರ್ಶನ (Walk in Interview) ನಡೆಯುವ ಸ್ಥಳಗಳು:

I. **ಮಂಗಳೂರು ವಲಯ**: ದಿ: 21-01-2026 ಸಮಯ: ಬೆಳಿಗ್ಗೆ 10-00 ರಿಂದ 2-00 ರವರೆಗೆ
ಸ್ಥಳ: ಕಾರಾವಿ. ಆಸ್ಪತ್ರೆ, ಕದ್ರಿ, ಶಿವಭಾಗ್, ಮಂಗಳೂರು

| ಕ್ರಮ ಸಂ | ಕಾರಾವಿ ಚಿಕಿತ್ಸಾಲಯ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | ಕಾರಾವಿ ಚಿಕಿತ್ಸಾಲಯ, ಕರಂಗಲ್ ಪಾಡಿ | 1 |
| 2 | ಕಾರಾವಿ ಚಿಕಿತ್ಸಾಲಯ, ಕುಲಶೇಖರ | 1 |
| 3 | ಕಾರಾವಿ ಚಿಕಿತ್ಸಾಲಯ, ಪಣಂಬೂರು | 1 |
| 4 | ಕಾರಾವಿ ಚಿಕಿತ್ಸಾಲಯ, ಪುತ್ತೂರು | 1 |
| 5 | ಕಾರಾವಿ ಚಿಕಿತ್ಸಾಲಯ, ಮಣಿಪಾಲ | 1 |
| 6 | ಕಾರಾವಿ ಚಿಕಿತ್ಸಾಲಯ, ಕುಂದಾಪುರ | 1 |
| 7 | ಕಾರಾವಿ ಚಿಕಿತ್ಸಾಲಯ, ಪಡುಬಿದ್ರಿ | 1 |
| 8 | ಕಾರಾವಿ ಚಿಕಿತ್ಸಾಲಯ, ಗಂಜೀಮಠ | 1 |

II. **ದಾವಣಗೆರೆ ವಲಯ**: ದಿ: 21-01-2026 ಸಮಯ: ಬೆಳಿಗ್ಗೆ 10-00 ರಿಂದ 2-00 ರವರೆಗೆ
ಸ್ಥಳ: ಕಾರಾವಿ. ಆಸ್ಪತ್ರೆ, ನಿಟ್ಟುವಳ್ಳಿ, ದಾವಣಗೆರೆ

| ಕ್ರಮ ಸಂ | ಕಾರಾವಿ ಚಿಕಿತ್ಸಾಲಯ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | ಕಾರಾವಿ ಚಿಕಿತ್ಸಾಲಯ, ಬಿ ಹೆಚ್ ರಸ್ತೆ, ಶಿವಮೊಗ್ಗ | 1 |
| 2 | ಕಾರಾವಿ ಚಿಕಿತ್ಸಾಲಯ, ರಾಣಿಬೆನ್ನೂರು | 1 |

III. **ಬೆಳಗಾವಿ ವಲಯ**: ದಿ: 21-01-2026 ಸಮಯ: ಬೆಳಿಗ್ಗೆ 10-00 ರಿಂದ 2-00 ರವರೆಗೆ
ಸ್ಥಳ: ಕಾರಾವಿ. ಆಸ್ಪತ್ರೆ, ಬೆಳಗಾವಿ

| ಕ್ರಮ ಸಂ | ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | ಕಾರಾವಿ ಚಿಕಿತ್ಸಾಲಯ, ಗೋಕಾಕ್ | 1 |
| 2 | ಕಾರಾವಿ ಚಿಕಿತ್ಸಾಲಯ, ಕೊಣ್ಣೂರು | 1 |
| 3 | ಕಾರಾವಿ ಚಿಕಿತ್ಸಾಲಯ, ಉದ್ಯಂಭಾಗ್ | 1 |
| 4 | ಕಾರಾವಿ ಚಿಕಿತ್ಸಾಲಯ, ಯಮುನಾಪುರ | 1 |

IV. **ಮೈಸೂರು ವಲಯ**: ದಿ: 21-01-2026 ಸಮಯ: ಬೆಳಿಗ್ಗೆ 10-00 ರಿಂದ 2-00 ರವರೆಗೆ
ಸ್ಥಳ: ಕಾರಾವಿ. ಆಸ್ಪತ್ರೆ, ಕೆ.ಆರ್ ರಸ್ತೆ, ಮೈಸೂರು

| ಕ್ರಮ ಸಂ | ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | ಕಾರಾವಿ ಚಿಕಿತ್ಸಾಲಯ, ಟಿ ನರಸೀಪುರ | 1 |
| 2 | ಕಾರಾವಿ ಚಿಕಿತ್ಸಾಲಯ, ಅರಸೀಕೆರೆ | 1 |

Scanned by CamScanner

V. **ಹುಬ್ಬಳ್ಳಿ ವಲಯ**: ದಿ: 21-01-2026 ಸಮಯ: ಬೆಳಿಗ್ಗೆ 10-00 ರಿಂದ 2-00 ರವರೆಗೆ
ಸ್ಥಳ: ಕಾರಾವಿ. ಆಸ್ಪತ್ರೆ, ಹುಬ್ಬಳ್ಳಿ

| ಕ್ರಮ ಸಂ | ಕಾರಾವಿ ಆಸ್ಪತ್ರೆ / ಚಿಕಿತ್ಸಾಲಯ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | ಕಾರಾವಿ ಚಿಕಿತ್ಸಾಲಯ, ಹುಬ್ಬಳ್ಳಿ-1 | 1 |
| 2 | ಕಾರಾವಿ ಚಿಕಿತ್ಸಾಲಯ, ಗದಗ್ | 1 |
| 3 | ಕಾರಾವಿ ಚಿಕಿತ್ಸಾಲಯ, ಮುಧೋಳ | 1 |
| 4 | ಕಾರಾವಿ ಚಿಕಿತ್ಸಾಲಯ, ಸಂಡೂರು | 1 |
| 5 | ಕಾರಾವಿ ಚಿಕಿತ್ಸಾಲಯ, ಯಾದಗಿರಿ | 1 |
| 6 | ಕಾರಾವಿ ಚಿಕಿತ್ಸಾಲಯ, ಚಿಂಚೋಳಿ | 1 |
| 7 | ಕಾರಾವಿ ಚಿಕಿತ್ಸಾಲಯ, ನೌಬಾದ್ | 1 |

VI. **ಬೆಂಗಳೂರು ವಲಯ**: ದಿ: 21-01-2026 ಸಮಯ: ಬೆಳಿಗ್ಗೆ 10-00 ರಿಂದ 2-00 ರವರೆಗೆ
ಸ್ಥಳ: ಕಾರಾವಿ. ಆಸ್ಪತ್ರೆ, ಇಂದಿರಾನಗರ, ಬೆಂಗಳೂರು

| ಕ್ರಮ ಸಂ | ಕಾರಾವಿ ಚಿಕಿತ್ಸಾಲಯ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | ಕಾರಾವಿ ಚಿಕಿತ್ಸಾಲಯ, ಅತ್ತಿಬೆಲೆ | 1 |
| 2 | ಕಾರಾವಿ ಚಿಕಿತ್ಸಾಲಯ, ಬೊಮ್ಮಸಂದ್ರ | 1 |
| 3 | ಕಾರಾವಿ ಚಿಕಿತ್ಸಾಲಯ, ದ್ಯಾವಸಂದ್ರ | 1 |
| 4 | ಕಾರಾವಿ ಚಿಕಿತ್ಸಾಲಯ, ಸುಬ್ರಮಣ್ಯಪುರ | 1 |
| 5 | ಕಾರಾವಿ ಚಿಕಿತ್ಸಾಲಯ, ಚನ್ನಪಟ್ಟಣ | 1 |
| 6 | ಕಾರಾವಿ ಚಿಕಿತ್ಸಾಲಯ, ದೊಡ್ಡಬಳ್ಳಾಪುರ | 2 |
| 7 | ಕಾರಾವಿ ಚಿಕಿತ್ಸಾಲಯ, ಕುಣಿಗಲ್ | 1 |
| 8 | ಕಾರಾವಿ ಚಿಕಿತ್ಸಾಲಯ, ವಸಂತ ನರಸಾಪುರ | 1 |

ಅರ್ಜಿಯೊಂದಿಗೆ ಒದಗಿಸಬೇಕಾದ ದಾಖಲೆಗಳು:

- ಜನ್ಮದಿನಾಂಕವನ್ನು ಸಮರ್ಥಿಸುವ ಎಸ್.ಎಸ್.ಎಲ್.ಸಿ. ಅಂಕಪಟ್ಟಿ
- ಕ್ಯುಮಿಲೇಟಿವ್ ದಾಖಲೆ ಪ್ರತಿ,
- ಶೈಕ್ಷಣಿಕ ದಾಖಲೆಗಳು
- ಮೀಸಲಾತಿ ಬಯಸುವವರು ಸರ್ಕಾರಿ ಆದೇಶದನ್ವಯ ಸಕ್ಷಮ ಪ್ರಾಧಿಕಾರದಿಂದ ಪಡೆದ ನಿಗಧಿತ ಜಾತಿ ಪ್ರಮಾಣ ಪತ್ರಗಳ ದೃಢೀಕೃತ ಒಂದು ಸೆಟ್ ನ್ನು ಅರ್ಜಿಯೊಂದಿಗೆ ಒದಗಿಸಬೇಕು.
- 3.5 x 4.5 ಅಳತೆಯ ಇತ್ತೀಚಿನ 2 ಭಾವಚಿತ್ರಗಳ ಪೈಕಿ ಒಂದನ್ನು ಅರ್ಜಿಗೆ ಅಂಟಿಸಿ ಮತ್ತೊಂದನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.
- ಆಯ್ಕೆಯಾದ ಅಭ್ಯರ್ಥಿಗಳು ಆಯಾ ಚಿಕಿತ್ಸಾಲಯಗಳ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧರಿರಬೇಕು.

ನೇರ ಸಂದರ್ಶನದಲ್ಲಿ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಸಿದ್ಧಪಡಿಸುವಾಗ ಎಂ.ಬಿ.ಬಿ.ಎಸ್. ಪದವಿಯಲ್ಲಿ ಹೆಚ್ಚಿನ ಅಂಕ ಗಳಿಸಿದ ಅಭ್ಯರ್ಥಿಗಳಿಗೆ ಮೀಸಲಾತಿಗನುಗುಣವಾಗಿ ಆದ್ಯತೆ ನೀಡಿ ಕಡಿಮೆ ಅಂಕ ಗಳಿಸಿರುವ ಅಭ್ಯರ್ಥಿಗಳು ರಾಜ್ಯದ ಯಾವುದೇ ಭಾಗದಲ್ಲಾದರೂ ಸೇವೆ ಮಾಡಲು ಸಹಮತ ವ್ಯಕ್ತಪಡಿಸಿದಲ್ಲಿ ಅಂತಹವರನ್ನು ಕಾಯ್ದಿರಿಸಿದ ಪಟ್ಟಿಯಲ್ಲಿರಿಸಿ (Waiting List) ಖಾಲಿ ಉಳಿದ ಸ್ಥಳಗಳಿಗೆ ನೇಮಕ ಮಾಡಲಾಗುವುದು. ಅರ್ಜಿ ನಮೂನೆ ಮತ್ತು ವಿವರಗಳನ್ನು ಇಲಾಖೆಯ ವೆಬ್ ಸೈಟ್ esisms.karnataka.gov.in ಮೂಲಕ ಪಡೆಯಬಹುದು.

Scanned by CamScanner

ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಪೂರ್ಣ ಅಧಿಕಾರವನ್ನು ಆಯ್ಕೆ ಸಮಿತಿಯು ಹೊಂದಿರುತ್ತದೆ. ಈ ಬಗ್ಗೆ ಯಾವುದೇ ಶಿಫಾರಸ್ಸು ಮತ್ತು ಮನವಿಗಳಿಗೆ ಮಾನ್ಯತೆ ಇರುವುದಿಲ್ಲ. ನೇಮಕಾತಿ ಪ್ರಾಧಿಕಾರಿ ತೀರ್ಮಾನವನ್ನು ಪ್ರಶ್ನಿಸುವ ಅಧಿಕಾರವು ಬೆಂಗಳೂರು ನಗರ ವ್ಯಾಪ್ತಿಗೊಳಪಟ್ಟಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸ್ಥಿರ ದೂರವಾಣಿ ಸಂಖ್ಯೆ: 080-23324216 / 23324218 ಸಂಪರ್ಕಿಸಬಹುದು.

ಆಯುಕ್ತರು,
ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು,
ರಾಜಾಜಿನಗರ, ಬೆಂಗಳೂರು-10.

Scanned by CamScanner